VIJAYAKUMAR KANNUR
Digitally signed by VIJAYAKUMAR KANNUR
Date: 2026.02.25 16:27:33 +0530



**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 24.02.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 1 ರಿಂದ 7 ರವರ ಪರ ಶ್ರೀ ಹೆಚ್ ಎ ಕೆ ವಕೀಲರಿಂದ :**

ಪ್ರತಿವಾದಿ 8 ಮತ್ತು 9 ರವರು ಸಿದ್ದಾಪೂರ ಮನೆತನಕ್ಕೆ ಸಂಬಂಧಪಟ್ಟಿರುವುದಿಲ್ಲ ಎಂದರೆ ಸರಿ. ಇವರು ಈ ದಾವಾ ಆಸ್ತಿಗಳಿಗೂ ಸಹ ಸಂಬಂಧಪಟ್ಟಿರುವುದಿಲ್ಲ ಎಂದರೆ ಸರಿ. ನಿಂಗರಾಜನ ತಂದೆಯ ಹೆಸರು ಬಾಳಪ್ಪ. ಬಾಳಪ್ಪನ ತಂದೆಯ ಹೆಸರು ಕರಿಯಪ್ಪ. ಬಾಳಪ್ಪನ ತಂದೆಯ ಹೆಸರು ಕರಿಯಪ್ಪ ಅಂತ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಿದ್ದಾಪೂರ ಮನೆತನದ ಬಗ್ಗೆ ನನಗೆ ಸುಮಾರು 40-50 ವರ್ಷಗಳಿಂದಲೂ ಪರಿಚಯವಿರುವುದು. ನಿಂಗರಾಜನ ಅಜ್ಜನ ಹೆಸರು ಶಿವಪ್ಪ. ಇತನಿಗೆ 6 ಜನ ಸಹೋದರರು. ಅವರೇಂದರೆ ಕರಿಯಪ್ಪ, ಮಲ್ಲಪ್ಪ, ರಾಮಲಿಂಗಪ್ಪ, ಉಳಿದವರ ಹೆಸರು ನನಗೆ ನೆನಪಿರುವುದಿಲ್ಲ.

2. ಬಾಳಪ್ಪನ ತಂದೆಯ ಹೆಸರು ಶಿವಪ್ಪ ಎಂದರೆ ಸರಿ. ಶಿವಪ್ಪನಿಗೆ ಇಬ್ಬರು ಸಹೋದರರು ಎಂದರೆ ಸರಿ. ಶಿವಪ್ಪ ಹಿರಿಯ ಮಗನಾಗಿರುವನು ಎಂದರೆ ಸರಿ. ಶಿವಪ್ಪನ ಮೊದಲನೇ ಸಹೋದರ ಅಡಿವೆಪ್ಪ. 2 ನೇ ಸಹೋದರ ಹಣಮಂತ. ಈ ರೀತಿ ಇವರು ಮೂರು ಜನ ಸಹೋದರರು ಎಂದರೆ ಸರಿ. ಈ ಮೂರು ಜನ ಸಹೋದರರ ಮಧ್ಯ ಯಾವ ವರ್ಷ ದಲ್ಲಿ ವಾಟ್ನಿ ಮಾಡಿಕೊಂಡಿರುವರು ಎಂದು ನನಗೆ ಗೊತ್ತಿರುವುದಿಲ್ಲ. ಬಾಳಪ್ಪ ತಂದೆ ಶಿವಪ್ಪನಿಗೆ ಎಷ್ಟು ಎಕರೆ ಜಮೀನು ಬಂದಿರುವವು ಎಂಬುದರ ಬಗ್ಗೆ ನನಗೆ ನೆನಪಿರುವುದಿಲ್ಲ. ಬಾಳಪ್ಪನ ಚಿಕ್ಕಪ್ಪ ಹಣಮಂತಪ್ಪ ಸೊಸೈಟಿಯಲ್ಲಿ ಕಾಯರ್ದಶಿ ಅಂತ ಕೆಲಸ ಮಾಡುತ್ತಿದ್ದ ಎಂದರೆ ಸರಿ. ಅದೇ ರೀತಿ ಬಾಳಪ್ಪ ಸೊಸೈಟಿಯಲ್ಲಿ ಕಾರಕೂನ ಅಂತ ಕೆಲಸ ಮಾಡುತ್ತಿದ್ದ ಎಂದರೆ ಸರಿ.

3. ಬಾಳಪ್ಪ ತನ್ನ ಹೆಂಡತಿ ಮತ್ತು ಮಕ್ಕಳೊಂದಿಗೆ ಬೇರೆಯಾಗಿ ಆತ ಸೊಸೈಟಿಯಲ್ಲಿ ಕಾರಕೂನ ಅಂತ ಕೆಲಸ ಮಾಡುತ್ತಿದ್ದ ಎಂದರೆ ಸರಿಯಲ್ಲ. ಬಾಳಪ್ಪನ ಮಕ್ಕಳು ಬೇರೆಯಾಗಿ ವಾಸಿಸುತ್ತಾ ಹಾಲಿನ ಡೈರಿಯ ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಇವರೆಲ್ಲರೂ ಏಕತ್ರ ಕುಟುಂಬದ ಸದಸ್ಯರಾಗಿಯೇ ಇದ್ದುಕೊಂಡು ಈ ವ್ಯಾಪಾರ ಮಾಡುತ್ತಿದ್ದರು. 1985 ರಿಂದಲೂ ಬಾಳಪ್ಪ ಮತ್ತು ಆತನ ಗಂಡು ಮಕ್ಕಳು ಪ್ರತ್ಯೇಕವಾಗಿ ವಾಸಿಸುತ್ತಿರುವರು ಎಂದರೆ ಸರಿಯಲ್ಲ. ಬಾಳಪ್ಪನ ಮನೆತನಕ್ಕೆ ಸಂಬಂಧಪಟ್ಟಂತೆ ಜಮೀನುಗಳ ಪಹಣಿ ಪತ್ರಿಕೆಯನ್ನು ನಾನು ನೋಡಿರುವುದಿಲ್ಲ.

4. ಸರ್ವೇ ನಂಬರ್ 308/4, 308/10 ಹಾಗೂ 308/11 ರ ಜಮೀನುಗಳನ್ನು ಪ್ರತಿವಾದಿ 2, 3 ಮತ್ತು 4 ರವರ ಹೆಸರಿನಲ್ಲಿ ಖರೀದಿಯಾಗಿರುವವು ಎಂದರೆ ಸಾಕ್ಷಿ ನುಡಿಯುವುದೇನೆಂದರೆ ಬಾಳಪ್ಪನ ಜೀವಿತಾವಧಿಯಲ್ಲಿ ಈ ಜಮೀನುಗಳನ್ನು ಖರೀದಿ ಮಾಡಿರುವುದಾಗಿ ಎಂದು ಉತ್ತರಿಸುವರು. ಈ ಸಂಗತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಮೂರು ಆಸ್ತಿಗಳನ್ನು ಪ್ರತಿವಾದಿ 2 ರಿಂದ 4 ರವರು ತಮ್ಮ ಸ್ವಂತ ದುಡಿಮೆಯ ಆದಾಯದಿಂದ ಖರೀದಿ ಮಾಡಿರುವಂತಹ ಆಸ್ತಿಗಳಾಗಿರುವವು ಎಂದರೆ ಸರಿಯಲ್ಲ.

5. ನಿಂಗರಾಜ ಮೃತ ಪಟ್ಟ ನಂತರ ಬಾಳಪ್ಪ ಮೃತ ಪಟ್ಟಿರುವನು ಎಂದರೆ ಸರಿ. ಬಾಳಪ್ಪ ಮತ್ತು ಆತನ ಸಹೋದರರ ಮಧ್ಯೆ ಯಾವ ವರ್ಷದಲ್ಲಿ ವಾಟ್ನಿ ಮಾಡಿಕೊಂಡಿರುವರು ಎಂದು ನನಗೆ ಗೊತ್ತಿರುವುದಿಲ್ಲ. ಇವರು ವಾಟ್ನಿ ಮಾಡಿಕೊಂಡಿರುವ ದಾಖಲೆಗಳನ್ನು ನೋಡುವಂತಹ ಯಾವುದೇ ಪ್ರಸಂಗ ನನಗೆ ಬಂದಿರುವುದಿಲ್ಲ. ಬಾಳಪ್ಪ ಮತ್ತು ಆತನ ಸಹೋದರರ ಮಧ್ಯೆ 2002-03 ನೇ ಸಾಲಿನಲ್ಲಿ ವಾಟ್ನಿ ಮಾಡಿಕೊಂಡಿರುವರು ಎಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸುವರು. ಈ ಪಾಲು ವಾಟ್ನಿಯ ಪ್ರಕಾರ ದಾವಾ ಆಸ್ತಿಯ ಸರ್ವೇ ನಂಬರ್ 298/3 ಬಿ ಬಾಳಪ್ಪನ ಪಾಲಿಗೆ ಬಂದಿರುವುದು ಎಂದರೆ ಸರಿ. ಬಾಳಪ್ಪ ಮೃತ ಪಟ್ಟ ನಂತರ ಈ ಜಮೀನಿಗೆ ವಾರಸಾನಾತೆಯಿಂದ ಆತನ ಹೆಂಡತಿ ಮತ್ತು ಮಕ್ಕಳ ಹೆಸರಿನಲ್ಲಿ ಹಕ್ಕು ಬದಲಾವಣೆಯಾಗಿದೆ ಎಂದರೆ ಸರಿಯಲ್ಲ. ಸರ್ವೇ ನಂಬರ್ 298/3 ಬಿ ಜಮೀನಿನ ಪಹಣಿ ಪತ್ರಿಕೆಯನ್ನು ನಾನು ನೋಡಿರುವುದಿಲ್ಲ. ಬಾಳಪ್ಪ ಮೃತ ಪಟ್ಟ

ನಂತರ ಸರ್ವೇ ನಂಬರ್ 298/3 ಬಿ ಜಮೀನಿನಲ್ಲಿ ಆತನ ಹೆಂಡತಿ ಮತ್ತು ಮಕ್ಕಳು ಪಾಲು ವಾಟ್ನಿ ಮಾಡಿಕೊಂಡು ಪ್ರತ್ಯೇಕವಾಗಿ ವಾಸವಾಗಿರುವರು ಎಂದರೆ ಸರಿಯಲ್ಲ.

6. ನನ್ನ ಸಾಕ್ಷಿಯ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಖಂಡಿಕೆ 5 ರಲ್ಲಿ ಹೇಳಿರುವಂತೆ ನಿಂಗರಾಜ ಮೃತ ಪಟ್ಟ ನಂತರ ಆತನ ಕುಟುಂಬ ಸದಸ್ಯರ ಮಧ್ಯೆ ಮೌಖಿಕವಾಗಿ ಪಾಲು ವಾಟ್ನಿ ಮಾಡಿಕೊಂಡಿರುವರು ಎಂದು ನಾನು ಹೇಳಿ ಬರೆಸಿರುವುದಿಲ್ಲ. ಸರ್ವೇ ನಂಬರ್ 298/3 ಬಿ ಆಸ್ತಿಯು ಬಾಳಪ್ಪನಿಗೆ ಹಿರಿಯರಿಂದ ಬಂದಿರುವಂತಹ ಒಂದೇ ಆಸ್ತಿಯಾಗಿರುವುದು ಎಂದರೆ ಸರಿಯಲ್ಲ. ದಾವಾ ಆಸ್ತಿ ಸರ್ವೇ ನಂಬರ್ 308/4, 308/10 ಹಾಗೂ 308/11 ರ ಆಸ್ತಿಗಳು ಪ್ರತಿವಾದಿ 2 ರಿಂದ 4 ರವರ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ಪ್ರತಿವಾದಿ 2 ರಿಂದ 4 ರವರು ಈ ಮೂರು ಆಸ್ತಿಗಳನ್ನು ತಮ್ಮ ತಮ್ಮ ಹೆಸರಿನಲ್ಲಿ ಖರೀದಿ ಮಾಡಿದ ನಂತರ ಅವರ ಹೆಸರಿನಲ್ಲಿ ಹಕ್ಕು ಬದಲಾಣೆಯಾಗಿದೆ ಎಂದರೆ ಈ ಆಸ್ತಿಗಳು ಏಕತ್ರ ಕುಟುಂಬದ ಆಸ್ತಿಗಳಾಗಿರುವುದಾಗಿ ಎಂದು ಸಾಕ್ಷಿ ಉತ್ತರಿಸುವರು. ಈ ಮೂರು ಆಸ್ತಿಗಳನ್ನು ಪ್ರತಿವಾದಿ 2 ರಿಂದ 4 ರವರು ಪ್ರತಿವಾದಿ 5 ರಿಂದ 7 ರವರ ಹೆಸರಿನಲ್ಲಿ ಬಕ್ಷಿಸ್ ಪತ್ರ ಮಾಡಿರುವರು ಎಂದರೆ ಈ ಪಾಲು ವಾಟ್ನಿ ಮಾಡಿಕೊಳ್ಳದೇ ಅವರು ಬಕ್ಷಿಸ್ ಪತ್ರ ಮಾಡಿಕೊಟ್ಟಿರುವುದಾಗಿ ಎಂದು ಸಾಕ್ಷಿ ಉತ್ತರಿಸುವರು. ಈ ಮೂರು ಆಸ್ತಿಗಳು ಪ್ರತಿವಾದಿ 2 ರಿಂದ 4 ರವರ ಹೆಸರಿನಲ್ಲಿ ಖರೀದಿ ಮಾಡುವ ಸಂಗತಿ ನನಗೆ ಗೊತ್ತಿತ್ತು ಎಂದರೆ ಸರಿ. ಅದೇ ರೀತಿ ಪ್ರತಿವಾದಿ 2 ರಿಂದ 4 ರವರು ಈ ಆಸ್ತಿಗಳನ್ನು ಪ್ರತಿವಾದಿ 5 ರಿಂದ 7 ರವರ ಹೆಸರಿನಲ್ಲಿ ಬಕ್ಷಿಸ್ ಮಾಡುವ ಸಂಗತಿ ನನಗೆ ಗೊತ್ತಿರಲಿಲ್ಲ. ಈ ಮೂರು ಆಸ್ತಿಗಳು ಪ್ರತಿವಾದಿ 5 ರಿಂದ 7 ರವರ ಹೆಸರಿನಲ್ಲಿ ಹಕ್ಕು ಬದಲಾವಣೆಯಾಗಿದೆ ಎಂದರೆ ಸರಿ.

7. ವಾದಿ 1 ರವರ ಗಂಡ ನಿಂಗರಾಜ ಜನ್ಮತಾಳಿದ ನಂತರ ಇತ 5 ವರ್ಷದ ಮಗುವಾಗಿದ್ದಾಗ ಭಾಗವ್ವ ಜನವಾಡ ಎಂಬುವವಳು ಆತನ ಪಾಲನೆ ಪೋಷಣೆ ಮಾಡಿರುವಳು ಎಂದರೆ ಸರಿಯಲ್ಲ. ಭಾಗವ್ವಳಿಗೆ ಮಕ್ಕಳಾಗದ ಕಾರಣ ಅವಳು ನಿಂಗರಾಜನನ್ನು ಪಾಲನೆ ಪೋಷಣೆ ಮಾಡಿರುವಳು ಎಂದರೆ ಸರಿಯಲ್ಲ. ಇತನ ವಿವಾಹವನ್ನು ಸಹ ಭಾಗವ್ವಳೇ ಮಾಡಿರುವಳು

ಎಂದರೆ ಸರಿಯಲ್ಲ. ಆತನ ತಂದೆ ಬಾಳಪ್ಪ ಮಾಡಿರುವನು. ಸಿದ್ದಾಪೂರ ಮನೆತನದಲ್ಲಿ ಪಾಲು ವಾಟ್ನಿ ಆಗಿರುವುದಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

8. ಬೆಳಗಲಿ ಪಂಚಾಯಿತಿಯ ಆಸ್ತಿ ನಂ. 283 ಮತ್ತು 284 ಇವು ನಿಂಗರಾಜನ ಹೆಸರಿನಲ್ಲಿ ಇರುವವು ಎಂದರೆ ಸರಿ. ಸರ್ವೇ ನಂಬರ್ 308/4, 308/10 ಹಾಗೂ 308/11 ರ ಜಮೀನುಗಳನ್ನು ಪ್ರತಿವಾದಿ 2 ರಿಂದ 4 ರವರು ಸ್ವಂತ ಸಂಪಾದನೆ ಮಾಡಿರುವ ಆಸ್ತಿ ಎಂದು ನನಗೆ ಗೊತ್ತಿದ್ದರೂ ಸಹಿತ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷಿಯ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಸಿ ಹಾಕಿರುವ ಸಂಗತಿಗಳಿಗೆ ವಾದಿಯರೇ ಮಾಹಿತಿ ನೀಡಿರುವರು ಎಂದರೆ ಸರಿಯಲ್ಲ. ನನ್ನ ಸ್ವಂತಕ್ಕೆ ಮಾಹಿತಿ ಇರುವುದಾಗಿ ಎಂದು ಸಾಕ್ಷಿ ಉತ್ತರಿಸುವರು. ನಾನು ವಾದಿಯರ ಮಾತುಕೇಳಿಕೊಂಡು ಈ ಮೂರು ಜಮೀನುಗಳಲ್ಲಿ ಅವರಿಗೆ ಪಾಲು ಇರುವುದಾಗಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ವಾದಿ 1 ರಿಂದ 4 ರವರು ಈ ಮೊದಲು ಅಸಲು ದಾವಾ ನಂ. 149/2022 ರ ದಾವೆ ದಾಖಲು ಮಾಡಿದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಆ ದಾವೆಯಲ್ಲಿ ಚೌಕಾಸಿಯಾಗಿ ಅದನ್ನು ನ್ಯಾಯಾಲಯದವರು ವಜಾಗೊಳಿಸಿರುವರು ಎಂದರೆ ಅದರ ಬಗ್ಗೆ ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸುವರು. ಈ ದಾವೆಯ ಬಗ್ಗೆ ನನಗೆಯಾವುದೇ ಮಾಹಿತಿ ಇರದೇ ಇದ್ದರೂ ಸಹಿತ ನಾನು ವಾದಿಯರ ಮಾತುಕೇಳಿಕೊಂಡು ಸುಳ್ಳು ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಮುಧೋಳದ ಸಿವಿಲ್ ನ್ಯಾಯಾಲಯದಲ್ಲಿ ಮತ್ತು ಹೆಚ್ಚುವರಿ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಲಯದಲ್ಲಿಸಾಕಷ್ಟು ಪ್ರಕರಣಗಳಲ್ಲಿ ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿಯಲ್ಲ. ನನ್ನ ಚಿಕ್ಕಪ್ಪ ನನ್ನ ಹಾಗೂ ನನ್ನ ಕುಟುಂಬ ಸದಸ್ಯರ ಮೇಲೆ ಪಾಲು ವಾಟ್ನಿ ಕೋರಿ ದಾವೆ ದಾಖಲು ಮಾಡಿರುವರು ಎಂದರೆ ಸರಿ. ಆ ದಾವೆಯು ಎಲ್ಲಾ ನ್ಯಾಯಾಲಯದಲ್ಲಿ ನನ್ನ ವಿರುದ್ಧ ತೀರ್ಪು ಬಂದಿರುವುದು ಎಂದರೆ ಸರಿ. ಆ ತೀರ್ಪಿನ ಪ್ರಕಾರ ನನ್ನ ಚಿಕ್ಕಪ್ಪನಿಗೆ ಆತನ ಪಾಲನ್ನು ಅಳತೆ ಮಾಡಿ ನೀಡಿರುವರು ಎಂದರೆ ಸರಿಯಲ್ಲ. ಆ ಪಾಲು ವಾಟ್ನಿಯ ದಾವೆಯಲ್ಲಿ ಈ ದಾವೆಯ

ವಾದಿ 2 ಮತ್ತು 4 ರವರು ನನ್ನ ಪರವಾಗಿ ಸಹಾಯ ಮಾಡಿರುವುದರಿಂದ ಆ ಕಾರಣಕ್ಕೆ ಅವರಿಗೆ ಸಹಾಯ ಮಾಡುವ ಸಲುವಾಗಿ ನಾನು ಅವರ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಪ್ರತಿವಾದಿ 8 ಮತ್ತು 9 ರವರ ಪರ ಶ್ರೀ ಟಿ ಟಿ ಎಂ ವಕೀಲರಿಂದ :**

ಬಾಳಪ್ಪ 2017 ರಲ್ಲಿ ಮೃತ ಪಟ್ಟಿರುವರು ಎಂದರೆ ಸರಿ. ಇತನ ಹೆಂಡತಿ ಸುಶೀಲಾಬಾಯಿ 2004 ರಲ್ಲಿ ಮೃತ ಪಟ್ಟಿರುವಳು ಎಂದರೆ ಸರಿ. ಇವರಿಗೆ ಎಷ್ಟು ಜನ ಹೆಣ್ಣು ಮಕ್ಕಳು ಮತ್ತು ಗಂಡು ಮಕ್ಕಳು ಎಂದು ನನಗೆ ನೆನಪಿರುವುದಿಲ್ಲ. ಇವರಿಗೆ ಪ್ರತಿವಾದಿ 1 ರಿಂದ 4, ಮೃತ ವಿಜಯಕುಮಾರ, ಮೃತ ನಿಂಗರಾಜ ಹಾಗೂ ಮೃತ ಮೀನಾಕ್ಷಿ ಎಂಬ ಮಕ್ಕಳಿದ್ದರು ಎಂದರೆ ಸರಿ. ಮೀನಾಕ್ಷಿ ಹಾಗೂ ವಿಜಯಕುಮಾರ ವಿವಾಹವಾಗದೇ ಮೃತ ಪಟ್ಟಿರುವರು ಎಂದರೆ ಸರಿ. ಬಾಳಪ್ಪ ಮತ್ತು ಆತನ ಸಹೋದರರ ಮಧ್ಯೆ ಆದ ಪಾಲು ವಾಟ್ನಿಯ ಪ್ರಕಾರ ಸರ್ವೇ ನಂಬರ್ 298/3 ಬಿ, 7 ಎಕರೆ 10 ಗುಂಟೆ ಜಮೀನು ಆತನ ಪಾಲಿಗೆ ಬಂದಿರುವುದು ಎಂದರೆ ಸರಿ. ಪ್ರತಿವಾದಿ 2 ರಿಂದ 4 ರವರು ಸರ್ವೇ ನಂಬರ್ 308/4, 308/10 ಮತ್ತು 308/11 ರ ಜಮೀನುಗಳನ್ನು ಈ ಮೇಲಿನ ಜಮೀನಿನಿಂದ ಬಂದ ಆದಾಯದಿಂದಲೇ ಖರೀದಿ ಮಾಡಿರುವರು ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ವಾದಿ ಮತ್ತು ಪ್ರತಿವಾದಿಯರ ಮಧ್ಯೆ ಇವತ್ತಿನವರೆಗೂ ಪಾಲು ವಾಟ್ನಿ ಆಗಿರುವುದಿಲ್ಲ ಎಂದರೆ ಸರಿ.

2. ಬಾಳಪ್ಪನ ಮಗ ವಿಜಯಕುಮಾರ ಹಿಡಕಲ ಗ್ರಾಮದಲ್ಲಿ ಹೋಗಿ ವಾಸವಾಗಿರುವನು ಎಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸುವರು. ಬಾಳಪ್ಪನ ಸಂಬಂಧಿಕರು ಹಿಡಕಲ ಗ್ರಾಮದಲ್ಲಿ ಧರೆಪ್ಪ ಸೈದಾಪೂರ ಅಂತ ಇರುವರು ಎಂದರೆ ಸರಿ. ವಿಜಯಕುಮಾರ ದಿಃ 22.11.1983 ರಂದು ಯಲ್ಲವ್ವ ತಂದೆ ಪೀರಪ್ಪ ಹರಿಜನ ಎಂಬುವವಳು ವಿವಾಹ ಮಾಡಿಕೊಂಡಿರುವಳು ಎಂದರೆ ಸರಿಯಲ್ಲ. ವಿಜಯಕುಮಾರ ಹಿಡಕಲ ಗ್ರಾಮದಿಂದ ಮೇಲಿಂದ ಮೇಲೆ ಬೆಳಗಲಿ ಗ್ರಾಮಕ್ಕೆ ಹೋಗಿ ಬಂದು ಮಾಡುತ್ತಿದ್ದ ಎಂದರೆ ಸರಿಯಲ್ಲ. ಪ್ರತಿವಾದಿ 8 ಮತ್ತು 9 ರವರು ವಿಜಯಕುಮಾರನ ಮಗಕ್ಕಳಾಗಿರುವರು ಎಂದರೆ ಸರಿಯಲ್ಲ. ಏಕೆಂದರೆ ಆತ 12 ವರ್ಷವನಿದ್ದಾಗ ಮನೆಯಿಂದ

ಹೋಗಿರುವನು ಮರಳಿ ಬಂದಿರುವುದಿಲ್ಲ, ಆತ ಜೀವಂತ ಇರುವನೋ ಅಥವಾ ಮೃತ ಪಟ್ಟಿರುವ ಬಗ್ಗೆ ಮಾಹಿತಿ ಇರುವುದಿಲ್ಲ. ವಿಜಯಕುಮಾರ ಯಲ್ಲವ್ವಳನ್ನು ವಿವಾಹ ಮಾಡಿಕೊಂಡ ನಂತರ ಪ್ರತಿವಾದಿ 1 ರಿಂದ 4 ರವರು ಆತನನ್ನು ಕಡೆಗಣಿಸಿರುವರು ಎಂದರೆ ಸರಿಯಲ್ಲ. ವಿಜಯಕುಮಾರ ಹಿಡಕಲ ಗ್ರಾಮದಲ್ಲಿ ದಿಃ 07.05.2019 ರಂದು ಮೃತ ಪಟ್ಟಿರುವನು ಎಂದರೆ ಸರಿಯಲ್ಲ. ನಾನು ವಾದಿಯರ ಮಾತುಕೇಳಿಕೊಂಡು ವಿಜಯಕುಮಾರ 12 ವರ್ಷದವನಿದ್ದಾಗ ಮನೆಯಿಂದ ಹೊರಟು ಹೋಗಿರುವುದಾಗಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ 8 ಮತ್ತು 9 ರವರು ಮೃತ ವಿಜಯಕುಮಾರನ ಮೊದಲನೇಯ ವರ್ಗದ ವಾರಸುದಾರರಾಗಿರುವುದರಿಂದ ಇವರಿಗೂ ಸಹ ದಾವಾ ಆಸ್ತಿಗಳಲ್ಲಿ ಪಾಲು ಇರುವುದು ಎಂದರೆ ಸರಿಯಲ್ಲ. ಬಾಳಪ್ಪ ಮೃತ ಪಟ್ಟ ನಂತರ ಸರ್ವೇ ನಂಬರ್ 298/3ಬಿ ಆಸ್ತಿಗೆ ಸಂಬಂಧಪಟ್ಟಂತೆ ವಿಜಯಕುಮಾರನ ಮಕ್ಕಳನ್ನು ಬಿಟ್ಟು ಪ್ರತಿವಾದಿ 1 ರಿಂದ 4 ರವರು ಮತ್ತು ನಿಂಗರಾಜ ವಾರಸಾ ಮಾಡಿಕೊಂಡಿರುವರು ಎಂದರೆ ಸರಿಯಲ್ಲ. ಬಾಳಪ್ಪನ ಆಸ್ತಿಯಲ್ಲಿ ವಿಜಯಕುಮಾರನ ಮಕ್ಕಳಾದ ಪ್ರತಿವಾದಿ 8 ಮತ್ತು 9 ರವರಿಗೂ ಹಕ್ಕು ಇರುವುದು ಎಂದರೆ ಸರಿಯಲ್ಲ. ವಿಜಯಕುಮಾರ 12 ವರ್ಷದವನಿದ್ದಾಗಲೇ ಮನೆಯಿಂದ ಹೊರಟು ಹೋಗಿದ್ದು ಆತ ವಿವಾಹವಾಗಿರುವುದಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇರದೇ ಇದ್ದರೂ ಸಹಿತ ವಾದಿಯರ ಮಾತುಕೇಳಿಕೊಂಡು ಅವರ ಪರವಾಗಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷಿಯ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಸಿ ಹಾಕಿರುವ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ, ಆ ಎಲ್ಲಾ ಸಂಗತಿಗಳನ್ನು ವಾದಿಯರೇ ಹೇಳಿ ಬರೆಸಿರುವರು ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಪ್ರತಿವಾದಿ 8 ಮತ್ತು 9 ರವರಿಗೂ ಸಹ ಪಾಲು ಇದ್ದರೂ ಸಹಿತ ಪಾಲು ಇರುವುದಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ